ಮಟ್ಟದಲ್ಲಿ ಒಂದು ಸಭೆಯನ್ನು ಕರೆದು, ಆ ಸಭೆಗೆ ಸಂಬಂಧಪಟ್ಟ ಎಂ.ಎಲ್.ಎ.ಗಳು ಹಾಗೂ ಜಿಲ್ಲಾ ಪರಿಷತ್ತಿನ ಅಧ್ಯಕ್ಷರುಗಳು, ಉಪಾಧ್ಯಕ್ಷರುಗಳು, ಮಂಡಲ ಪಂಚಾಯಿತಿ ಪ್ರಧಾನರು ಆ ಸಭೆಯಲ್ಲಿ ಭಾಗವಹಿಸಿ ಅವರವರ ತಾಲ್ಲೂಕುಗಳಲ್ಲಿ ಹೆಚ್ಚಿನ ಕಷ್ಟಗಳು ಇರತಕ್ಕಂಥ ಹಳ್ಳಿಗಳು ಯಾವುವಿವೆ ಎಂಬುದನ್ನು ಗುರುತಿಸಿ ನಾವು ನೇರವಾಗಿ ಪರಿಹಾರವನ್ನು ಆ ಹಳ್ಳಿಗಳಿಗೆ ಮುಟ್ಟಿಸುವಂಥ ಭರವಸೆ ಸರ್ಕಾರಕ್ಕಿದೆ.

ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ.— ಮಾನ್ಯ ಅಧ್ಯಕ್ಷರೇ, ಜಿಲ್ಲಾಪರಿಷತ್ತಿನವರು ಬೋರ್‌ವೆಲ್‌ಗಳನ್ನು ಹಾಕಿಸುವುದಕ್ಕೆ ೧ ಲಕ್ಷ ೪೦ ಸಾವಿರ ರೂಪಾಯಿಗಳನ್ನು ಇಂಜಿನಿಯರಿಂಗ್ ವಿಭಾಗದವರಿಗೆ ಮೇ ತಿಂಗಳಿನಲ್ಲಿ ಬಿಡುಗಡೆ ಮಾಡಿದ್ದಾರೆ. ಈ ಹಣ ಸರ್ಕಾರದ ವತಿಯಿಂದ ಜಿಲ್ಲಾ ಪರಿಷತ್ತಿಗೆ ಯಾವ ತಿಂಗಳು ಬಿಡುಗಡೆ ಆಗಿತ್ತು?

ಶ್ರೀ ಎಂ. ವೈ. ಘೋರ್ಪಡೆ.— ಗುಲ್ಬರ್ಗಾ ಜಿಲ್ಲೆಗೆ ಕುಡಿಯುವ ನೀರಿಗೋಸ್ಕರ ಬಜೆಟ್‌ನಲ್ಲಿ ೨೫೫ ಲಕ್ಷ ರೂಪಾಯಿಗಳನ್ನು ಇಡಲಾಗಿದೆ. ಆದ್ದರಿಂದ ಕುಡಿಯುವ ನೀರಿನ ಕೆಲಸಕ್ಕೆ ಹಣ ಬಿಡುಗಡೆ ಆಗದೇ ಇರತಕ್ಕಂಥ ಪ್ರಶ್ನೆಯೇ ಇಲ್ಲ. ಎಸ್ಪೆಷಲಿ ಇದಕ್ಕೆ ಹೈಯರ್ಸ್ಟ್ ಪ್ರಿಯಾರಿಟಿ ಕೊಟ್ಟಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳು ಸಹ ಈ ಮಾತನ್ನು ಒಪ್ಪಿದ್ದಾರೆ. ನಾನು ಈಗಾಗಲೇ ಪೇಳಿದ ಪ್ರಕಾರ ಆ್ಯಕ್ಷನ್ ಪ್ಲಾನ್ ೯೦-೯೧ಕ್ಕೋಸ್ಕರ ಜಿಲ್ಲಾಪರಿಷತ್ತಿನವರು ಯಾವ ರೀತಿ ಹಣ ವಿಚ್ರ್ ಮಾಡುತ್ತೇವೆನ್ನುವ ಮಾಹಿತಿಯನ್ನು ಕೊಡಬೇಕಾಗಿತ್ತೋ, ಅದನ್ನು ಇವತ್ತಿನವರೆಗೂ ಕೊಟ್ಟಿಲ್ಲ. ತಾವು ಈ ವಿಷಯವನ್ನು ಜಿಲ್ಲಾ ಪರಿಷತ್ತಿನಲ್ಲಿ ಪ್ರಸ್ತಾಪ ಮಾಡಬೇಕು. ಜಗಳ ಮಾಡಬೇಕು. ಆ್ಯಕ್ಷನ್ ಪ್ಲಾನ್ ಏಕೆ ತಯಾರಿಸಿಲ್ಲವೆಂದು ಕೇಳಬೇಕು. ನಾನು ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಹತ್ತನೆಯ ಒಂದು ಭಾಗ ಸೇಡಂ ತಾಲ್ಲೂಕಿಗೆ ಬರಬೇಕು ಆ ಕಾರಣ ಜಿಲ್ಲಾ ಪರಿಷತ್ತಿನವರು ಆ್ಯಕ್ಷನ್ ಪ್ಲಾನ್ ತಯಾರು ಮಾಡುವುದರಲ್ಲಿ ತಡವಾಗಿರುತ್ತದೆ. ಅದನ್ನು ದಯವಿಟ್ಟು ಸರಿಪಡಿಸಲಿಕ್ಕೆ ನಿಮ್ಮ ಪ್ರಭಾವವನ್ನು ಉಪಯೋಗಿಸಬೇಕೆಂದು ಅಧ್ಯಕ್ಷರ ಮೂಲಕ ಸೂಚಿಸುತ್ತಿದ್ದೇನೆ.

ಕಾರವಾರ ಜಿಲ್ಲೆಯಲ್ಲಿ ಸಿಕ್ಕಿರುವ ಆನೆ ದಂತ

೪೬೦. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).— ಮಾನ್ಯ ಅರಣ್ಯ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಎರಡು ವರ್ಷಗಳ ಹಿಂದೆ ಕಾರವಾರ ಜಿಲ್ಲೆಯಲ್ಲಿ ೭ (ಏಳು) ಆದಿ ಉದ್ದದ ಆನೆಯ ದಂತ ಸಿಕ್ಕಿರುವುದು ನಿಜವೆ ?

೨) ಸಿಕ್ಕಿದ್ದರೆ ಅದನ್ನು ಎಲ್ಲಿ ಇಡಲಾಗಿದೆ ?

೩) ಅತ್ಯಂತ ಅಪರೂಪದ ಆನೆಯ ದಂತವನ್ನು ವಿಧಾನಸೌಧದಲ್ಲಿ ಅಲಂಕರಿಸಿ ಇಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನಾ ಮಂತ್ರಿಗಳು).—

೧) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಎರಡು ಆನೆಯ ದಂತ ಸಿಕ್ಕಿರುವುದು ನಿಜ. ಅವುಗಳ ಉದ್ದ ೩ ರಿಂದ ೪ ಅಡಿಯಿದ್ದು, ಅವುಗಳ ತೂಕ ಒಟ್ಟು ೪೭.೪೫೦ ಕಿಲೋಗ್ರಾಂ.

೨) ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ ವಿಭಾಗ, ಹೊನ್ನಾವರ ಇವರ ಕಛೇರಿಯಲ್ಲಿ ಡಲಾಗಿದೆ.

೩) ಆನೆಯನ್ನು ಕೊಂದು ದಂತವನ್ನು ಕಳ್ಳ ಸಾಗಾಣಿಕೆ ಮಾಡಿದ ಬಗ್ಗೆ ಹೊನ್ನಾವರ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ವನ್ಯ ಪ್ರಾಣಿ ಸಂರಕ್ಷಣಾ ಕಾಯ್ದೆ ಪ್ರಕಾರ ಮೊಕದ್ದಮೆಯನ್ನು ಹೂಡಲಾಗಿದ್ದು ಮೊಕದ್ದಮೆಯು ವಿಚಾರಣೆ ಹಂತದಲ್ಲಿದೆ. ನ್ಯಾಯಾಲಯದ ತೀರ್ಪಿನ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ಕಾರವಾರ ಜಿಲ್ಲೆಯಲ್ಲಿ, ಪತ್ರಿಕೆಗಳಲ್ಲಿ ಬಂದ ವರದಿ ಪ್ರಕಾರ ಆರೂವರೆ ಅಡಿ, ಏಳು ಅಡಿ ಎತ್ತರ ಇರತಕ್ಕಂಥ ಆನೆ ದ ತ ಸಿಕ್ಕಿದೆಯೆಂದು ಒಂದು ಜೀಪಿನ ಪಕ್ಕದಲ್ಲಿ ನಿಲ್ಲಿಸಿ ಅದನ್ನು ಫೋಟೋ ತೆಗೆದು ಪತ್ರಿಕೆಗಳಲ್ಲಿ ಹಾಕಿದ್ದರು. ಅದನ್ನು ನಾನು ನೋಡಿದ್ದೇವೆ. ಆ ದಂತಗಳನ್ನು ವಿಧಾನ ಸೌಧದಲ್ಲಿ ಇಡಬೇಕೆಂದು ನಾವು ಪ್ರಶ್ನೆ ಮಾಡಿದ್ದೆವು. ಆದರೆ

ಆ ವಿಷಯವನ್ನು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಆಗಿರಲಿಲ್ಲ. ಈಗ ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರದಲ್ಲಿ ದಂತವು ೪ ಅಡಿ ಇದೆಯೆಂದು ಹೇಳಿದ್ದಾರೆ. ಇದನ್ನು ವಿಚಾರ ಮಾಡ ಬೇಕೆಂದು ಮಾನ್ಯ ಮಂತ್ರಿಗಳಲ್ಲಿ ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಆತಿ ಅಪರೂಪದ ಆನೆ ದಂತಗಳು ಇವಾಗಿದ್ದವು. ಅಪರೂಪದ ಆನೆ ದಂತಗಳು ಈಗ ೪ ಅಡಿಗೆ ಬಂದಿದೆ ಎಂದರೆ ಇದರ ಬಗ್ಗೆ ನಮಗೆ ಸಂಶಯ ಬಂದಿದೆ. ಇವು ಅಪರೂಪದ ಆನೆ ದಂತಗಳು. ಜೇಪಿನೆ ಪಕ್ಕದಲ್ಲಿ ನಿಲ್ಲಿಸಿ ತೆಗೆದಿರುವ ಫೋಟೋವನ್ನು ನಾವು ಪತ್ರಿಕೆಗಳಲ್ಲಿ ನೋಡಿದ್ದೇವೆ. ಜೇಪಿನ ಎಂಜಿನ ಪಕ್ಕದಲ್ಲಿ ನಿಲ್ಲಿಸಿದಾಗ ಆ ದಂತಗಳು ಜೇಪಿನ ಎತ್ತರಕ್ಕೂ ಇದ್ದವು. ಈಗ ಕೇವಲ ೪ ಅಡಿಗಳು ಉದ್ದ ಇವೆ ಎಂದರೆ ಅದರ ಬಗ್ಗೆ ಸಂಶಯ ಬರುತ್ತದೆ. ಆದ್ದರಿಂದ ಇದರ ಬಗ್ಗೆ ತನಿಖೆ ಆಗಬೇಕು ಹಾಗೂ ಈ ದಂತಗಳನ್ನು ವಿಧಾನಸೌಧದಲ್ಲಿ ಇಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮ ವರದಿ ಪ್ರಕಾರ ಎರಡು ಕೊಂಬುಗಳು ಇಲ್ಲ. ಒಂದು ಕೊಂಬು ೨೧-೨-೧೯೬೮ರಂದು ೫ ಅಡಿ ೧೦ ಅಂಗಲ ಇರತಕ್ಕ ಒಂದು ಕೊಂಬು ೪ ಅಡಿ ೧೧ ಅಂಗಲ ಇರತಕ್ಕಂಥ ಇನ್ನೊಂದು ಕೊಂಬು ಇದೆ. ಇವುಗಳ ಒಟ್ಟು ತೂಕ ೪೭. ೪೫೫ ಕೆ.ಜಿ.

ಅಧ್ಯಕ್ಷರು.—ಇನ್ನೂ ಕಡಿಮೆ ಆಗದ ಹಾಗೆ ನೋಡಿಕೊಳ್ಳಬೇಕು ಅಷ್ಟೆ.

ಶ್ರೀ ಬಿ. ಬಸವಲಿಂಗಪ್ಪ.—೨೬-೫-೧೯೬೮ರಂದು ಒಂದು ಕೊಂಬು ೪ ಅಡಿ ೩ ಅಂಗುಲ ಇದೆ. ಇನ್ನೂ ಸಣ್ಣ ಸಣ್ಣವುಗಳು ಇವೆ. ಇದರ ಒಟ್ಟು ತೂಕ ೩೮.೫೯ ಕೆ ಜಿ. ಎಂದಿದೆ. ಇಷ್ಟು ಜಿಟ್ಟರೆ ಅವರು ಹೇಳತಕ್ಕಂಥ ಎರಡು ಕೊಂಬುಗಳು ನಮ್ಮ ವರದಿಯಲ್ಲಿ ಇಲ್ಲವೇ ಇಲ್ಲ.

ಶ್ರೀ ಬಿ. ಸ್ವಾಮಿರಾವ್.—ಎರಡು ಕೊಂಬುಗಳು ಏಕಕಾಲದಲ್ಲಿ ಒಂದೇ ಕಡೆ ಸಿಕ್ಕಿರುವುದು ಉಂಟು. ಒಂದೇ ಆನೆಯದು. ಆದರ ಉದ್ದ ಹೆಚ್ಚು ಕಡಿಮೆ ಆಗಲು ಸಾಧ್ಯವಿಲ್ಲ. ಪ್ರಜಾವಾಣಿ ಮತ್ತು ಬೇರೆ ಬೇರೆ ಪತ್ರಿಕೆಗಳಲ್ಲಿ ಅದರ ಚಿತ್ರ ಬಂದಿದೆ. ಆದ್ದರಿಂದ ಈ ಬಗ್ಗೆ ಸೂಕ್ತ ತನಿಖೆ ಮಾಡಿಸಿ ಪತ್ತೆಹಚ್ಚಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ವರದಿ ಹೀಗಿದೆ, ಅವರು ತನಿಖೆ ಆಗಬೇಕೆಂದು ಹೇಳುತ್ತಿದ್ದಾರೆ, ಆದ್ದರಿಂದ ತನಿಖೆ ಮಾಡಿಸುತ್ತೇನೆ.

ಅಧ್ಯಕ್ಷರು.—ಅವರು ತನಿಖೆ ಮಾಡಿಸುತ್ತಾರೆ.

ಶ್ರೀ ಬಿ. ಸ್ವಾಮಿರಾವ್.—ನಾನು ಆಗಲೇ ಹೇಳಿದಂತೆ ಆ ದಂತಗಳನ್ನು ವಿಧಾನಸೌಧದ ಒಳ್ಳೆಯ ಸ್ಥಳದಲ್ಲಿ ಅಂದರೆ ಸ್ಪೀಕರ್‌ರವರು ಕೂರುವ ಜಾಗದಲ್ಲಿ ಇಟ್ಟರೆ ಬಹಳ ಸಂತೋಷ. ಆ ರೀತಿ ಇಡುತ್ತಾರೆಯೇ ಎಂದು ನಾನು ಕೇಳುತ್ತೇನೆ ?

ಶ್ರೀ ಬಿ. ಬಸವಲಿಂಗಪ್ಪ.—ಕೊಂಬುಗಳನ್ನು ಇಡುವುದರ ಬಗ್ಗೆ ನಾನು ಹಂಗಾಮಿಯಾಗಿ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವೇ ಎಂದು ತಾವು ಹೇಳಬೇಕು. ನಮ್ಮ ವಶದಲ್ಲಿ ಬೇಕಾದಷ್ಟು ಕೊಂಬುಗಳಿವೆ. ಇವುಗಳನ್ನು ನಾಶ ಪಡಿಸಬೇಕೆಂಬ ಬಿಂದು ಅಭಿಪ್ರಾಯವಿದೆ. ಏಕೆಂದರೆ ಸ್ಮಗ್ಲರ್ಸ್ ಕೊಂಬುಗಳನ್ನು ಆನೆಗಳನ್ನು ಸಾಯಿಸಿ ಕೀಳುವುದು ಅವುಗಳಿಗೆ ಬೇರೆ ಕಡೆ ಒಳ್ಳೆಯ ಬೆಲೆ ಇದೆ ಎನ್ನುವುದಕ್ಕೋಸ್ಕರ ಆದ್ದರಿಂದ ಈ ದಂತ ವ್ಯಾಪಾರವನ್ನೇ ಬಹಿಷ್ಕರಿಸಬೇಕು ಎನ್ನುವುದು ಒಂದು ನಿಲುವು ಇದೆ ಇದಕ್ಕೆ ಬೆಲೆಯೇ ಸಿಗಬಾರದು ಅದಕ್ಕಾಗಿ ಅಖಿಲಭಾರತ ಮಟ್ಟದಲ್ಲಿ ಒಂದು ನಿಲುವು ತೆಗೆದುಕೊಳ್ಳಬೇಕು. ಅದಕ್ಕಾಗಿ ಇಡೀ ಇಂಡಿಯಾದಲೇ ದಂತ ಮಾರಬಾರದೆಂಬ ನಿಲುವನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ ಎಂತು ಇಂಡಿಯಾ ಸರ್ಕಾರದವರು ಸಹ ಇದನ್ನೆ ಯೋಚನೆ ಮಾಡುತ್ತಿದ್ದಾರೆ. ಆತಿ ಶೀಘ್ರದಲ್ಲೇ ತೀರ್ಮಾನ ತೆಗೆದುಕೊಳ್ಳುತ್ತಿದ್ದೇವೆ. ಇದರಿಂದ ಶ್ರೀಮಾನ್ ವೀರಪ್ಪನ್ ಅಂಥವರಿಗೆ ಅವಕಾಶ ಕಡಿಮೆಯಾಗುತ್ತದೆಂದು ನನ್ನ ಭಾವನೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಸಚಿವರು...

ಅಧ್ಯಕ್ಷರು.—ನೀವು ವೀರಪ್ಪನ್ ವಿಚಾರ ಏತಕ್ಕೆ ಹೇಳಿದಿರಿ. ಇದರಿಂದ ಅವರು ಎದ್ದರು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ನಾನು ಏನು ಕೇಳಬೇಕಾದಿದ್ದೇನೆ ಎಂಬುದು ತಮಗೆ ಗೊತ್ತಿದೆ.

ಶ್ರೀ ಬಿ. ಬಸವಲಿಂಗಪ್ಪ.—ವಾಟಾಳ್‌ರವರೇ ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್.—ಹಾಗೆ ಬೇಜವಾಬ್ದಾರಿಯಿಂದ ನೀವು ಹೇಳಬೇಡಿ. ಕುಳಿತುಕೊಳ್ಳಿ, ಎಂದು ಅಧ್ಯಕ್ಷರು ನನಗೆ ಹೇಳಬೇಕು.

ಶ್ರೀ ಬಸವಲಿಂಗಪ್ಪ.—ವಾತ್ಸಲ್ಯದಿಂದ ಹಾಗೆ ಹೇಳಿದೆ. ಹೇಳಬಾರದೆಂದರೆ ನಾನು ಹೇಳುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ವಾತ್ಸಲ್ಯದಿಂದ ಹೇಳಿದರೆ ನಾನು ವಿರೋಧ ಮಾಡುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಆಯಿತು. ಆಮೇಲೆ ಹಲವಾರು ಅಳತೆಯ ಕೊಂಬುಗಳಿವೆ. ಐದಾರು ಅಡಿ ಉದ್ದದ ಕೊಂಬುಗಳಿವೆ. ಅವನ್ನು ಏನು ಮಾಡಬೇಕೆಂದು ಯೋಚನೆ ಮಾಡುತ್ತೇವೆ. ಈ ಕೊಂಬುಗಳನ್ನು ಅಲಂಕಾರ ದೃಷ್ಟಿಯಿಂದ ಯಾವರೀತಿ ಬಳಸಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಮುಖ್ಯ ಮಂತ್ರಿಗಳ ಕಾರ್ಯಾಲಯ, ಮಂತ್ರಿಗಳ ಕಾರ್ಯಾಲಯ, ವಿಧಾನಸಭೆ, ಸರ್ಕಾರದ ಇನ್ನಿತರ ಕಛೇರಿಗಳಲ್ಲಿ ಈ ಕೊಂಬುಗಳನ್ನು ಅಲಂಕಾರದ ರೂಪದಲ್ಲಿ ಎಕ್ಸಿಬಿಟ್ ಮಾಡಬೇಕೆಂಬುದು ನಮ್ಮ ಆಸೆ. ಅದು ಇನ್ನೂ ಪೂರ್ಣಗೊಂಡಿಲ್ಲ. ಆದರೆ ಬಗ್ಗೆ ತೀರ್ಮಾನ ತೆಗೆದುಕೊಂಡಾಗ ತಪ್ಪದೆ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಬಹಳ ಮುಖ್ಯವಾದ ಉಪ ಪ್ರಶ್ನೆ ಕೇಳುತ್ತಿದ್ದೇನೆ. ಅರಣ್ಯ ಸಚಿವರು ವೀರಪ್ಪನ್‌ನನ್ನು ೭ ದಿವಸದಲ್ಲಿ ಹಿಡಿಯುತ್ತೇವೆಂದು ಇಲ್ಲಿ ಹೇಳಿಕೆ ಕೊಟ್ಟಿದ್ದರು. ಮತ್ತು ಹೊರಗಡೆ ಸಹ ಹೇಳಿದ್ದರು. ವೀರಪ್ಪನ್ ಪ್ರಶ್ನೆಯನ್ನು ನಾನು ಎತ್ತಿರುವುದು.

ಅಧ್ಯಕ್ಷರು.—ಟೋಟಲಿ ಇರ್‌ರಿಲೆವೆಂಟ್.

ಶ್ರೀ ವಾಟಾಳ್ ನಾಗರಾಜ್.—ನೀವು ಹೀಗೆ ಹೇಳಿಬಿಟ್ಟರೆ ಹೇಗೆ ?

(ಗೊಂದಲ)

ಅಧ್ಯಕ್ಷರು.—ಮಾನ್ಯ ಸಿಂಧ್ಯಾರವರು ದೇಶಪಾಂಡೆಯವರ ಪರವಾಗಿ ಮುಂದಿನ ಪ್ರಶ್ನೆಯನ್ನು ಕೇಳಬಹುದು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಬೆಳೆಸಿದ ಸಸಿಗಳು

೫೧೪. ಶ್ರೀ ಆರ್ ವಿ. ದೇಶಪಾಂಡೆ (ಹಳಿಯಾಳ).—ಮಾನ್ಯ ಅರಣ್ಯ ಮತ್ತು ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯಿಂದ ಕಳೆದ ೩ ವರ್ಷಗಳಲ್ಲಿ ಎಷ್ಟು ಸಸಿಗಳನ್ನು ನೆಡಲಾಗಿದೆ ?

ಆ) ಇದಕ್ಕಾಗಿ ವೆಚ್ಚವಾದ ಹಣವೆಷ್ಟು ?

ಇ) ಈ ಸಸಿಗಳ ಪೈಕಿ ಎಷ್ಟು ಸಸಿಗಳು ಬದುಕಿವೆ ?

ಈ) ಈ ವರ್ಷದ ಕಾರ್ಯಕ್ರಮವೇನು ?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನೆ ಮಂತ್ರಿಗಳು).—

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯಿಂದ ಕಳೆದ ೩ ವರ್ಷಗಳಲ್ಲಿ ನೆಡಲಾದ ಸಸಿಗಳ ವಿವರಗಳು ಕೆಳಗಿನಂತಿದೆ.—

೧೯೮೭–೮೮	೧೯೯.೦೭೦	ಲಕ್ಷ ಸಸಿಗಳು
೧೯೮೮–೮೯	೧೧೪.೯೨೫	ಲಕ್ಷ ಸಸಿಗಳು
೧೯೮೯–೯೦	೧೧೧.೧೧೩	ಲಕ್ಷ ಸಸಿಗಳು
ಒಟ್ಟು	೪೨೫.೧೦೮	ಲಕ್ಷ ಸಸಿಗಳು

ಆ) ಈ ಸಸಿಗಳನ್ನು ನೆಡಲು ವೆಚ್ಚವಾದ ಹಣ :

೧೯೮೭–೮೮	೩೬೭.೦೫೬	ಲಕ್ಷ ರೂಗಳು
೧೯೮೮–೮೯	೨೮೪.೯೨೬	ಲಕ್ಷ ರೂಗಳು
೧೯೮೯–೯೦	೩೫೨.೭೫೨	ಲಕ್ಷ ರೂಗಳು
ಒಟ್ಟು	೧೦೦೪.೭೩೪	ಲಕ್ಷ ರೂಗಳು

ಇ) ಈ ಸಸಿಗಳ ಪೈಕಿ ಶೇಕಡಾ ೮೦ ರಿಂದ ೯೦ ರಷ್ಟು ಸಸಿಗಳು ಬದುಕಿವೆ. ಖಾಲಿ ಸ್ಥಳದಲ್ಲಿ ಉಳಿಕೆ ಪ್ರಮಾಣ ಶೇಕಡಾ ೯೦ರಷ್ಟು ಇದ್ದು ಆಂಡರ್ ಪ್ಲಾಂಟಿಂಗ್ ಕ್ಷೇತ್ರದಲ್ಲಿ ಶೇಕಡಾ ೮೦ರಷ್ಟು ಇವೆ

ಈ) ೧೯೯೦–೯೧ನೇ ಸಾಲಿನಲ್ಲಿ ೬೬೩೨ ಹೆಕ್ಟೇರು ಪ್ರದೇಶದಲ್ಲಿ ೧೦೫.೭೦ ಲಕ್ಷ ಸಸಿಗಳನ್ನು ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.